ಹೊಂದಾಣಿಕೆ ಮೊತ್ತ ರೂ.2.75ಲಕ್ಷ ಬಿಡುಗಡೆಯಾಗಿದ್ದು, ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ.

ಮಮಇ 48 ಮಮಅ 2009

(ಪಿ.ಎಂ.ನರೇಂದ್ರಸ್ವಾಮಿ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

415 ಶ್ರೀ ನಾಡಗೌಡ ವೆಂಕಟರಾವ್

ಅ) ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬನಶಂಕರಿ ಶಾಖೆಯಲ್ಲಿ ಮೆ॥ ರಿಲಯಬಲ್ ಡೆವಲಪರ್ಸ್ ರವರು ಯೋಜನಾ ಸಾಲ ಪಡೆದಿದ್ದಾರೆಯೇ?

ರಿಲಯಬಲ್ ಡೆವಲಪರ್ಸ್ ಇದಕ್ಕೆ ಅಪೆಕ್ಸ್ ಬ್ಯಾಂಕು ರೂ.25.00 ಕೋಟಿಗಲ ವಸತಿ ಯೋಜನಾ ಸಾಲ ನೀಡಿರುತ್ತದೆ.

ಆ) ಮೆ॥ ರಿಲಯಬಲ್ ಡೆವಲಪರ್ಸ್ ರವರು ಯೋಜಿಸಿದ ಸನ್ ಫೀಲ್ಡ್ಸ್ ವಸತಿ ಯೋಜನೆ ಹೊಸೂರಿನಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಇದಕ್ಕೆ ರಾಜ್ಯ ಸಹಕಾರಿ ಅಪೆಕ್ಸ್ ನಿಯಮಿತ, ಸಾಲ ಮಂಜೂರಾತಿಯ ಎಲ್ಲಾ ನಿಯಮಗಳನ್ನು ಪಾಲಿಸಿ, ಸಾಲ ಮಂಜೂರು ಮಾಡಿದೆಯೇ? ಹಾಗಿಲ್ಲದಿದ್ದಲ್ಲಿ, ಯಾವ ನಿಯಮಗಳನ್ನು, ಮಾರ್ಗಸೂಚಿಗಳನ್ನು ಪಾಲಿಸಿದೆ?

ಬ್ಯಾಂಕು ಭಾಗಶ: ನಿಯಮಗಳನ್ನು ಪಾಲಿಸಿ ಸಾಲ ಮಂಜೂರು ಮಾಡಿದೆ. ಬ್ಯಾಂಕಿನ ಆಡಳಿತ ಮಂಡಳಿಯಿಂದ ಅನುಮೋದಿತವಾದ ಸಾಲ ನೀಡಿಕೆ ನಿಯಮಗಳನ್ವಯ ಬ್ಯಾಂಕಿನ ಆಡಳಿತ ಮಂಡಳಿಯು ಸಾಲ ಮಂಜೂರು ಮಾಡಿರುತ್ತದೆ.

ಇ) ಮೆ॥ ರಿಲಯಬಲ್ ಡೆವಲಪರ್ಸ್ ಯೋಜಿಸಿದ ರಿಲಯಬಲ್ ಸನ್ ಫೀಲ್ಡ್ಸ್ ವಸತಿ ಯೊಜನೆಗೆ ಮಂಜೂರು ಮಾಡಿರುವ ರೂ.25 ಕೋಟಿ ಸಾಲದ ಬಗ್ಗೆ ಸರ್ಕಾರದಿಂದ ಎಚ್ಚರಿಕೆ ನೀಡಲಾಗಿದೆಯೇ? ಹಾಗಿದ್ದಲ್ಲಿ ವಿವರ ನೀಡುವುದು.

ಸರ್ಕಾರದ ಪತ್ರ ಸಂ: ಸಿಒ 52/ ಸಿಎಲ್ಎಸ್/ 2008 ದಿ: 23–7–2008 ರಲ್ಲಿ ಇನ್ನು ಮುಂದೆ ಇಂತಹ ನಿಯಮಗಳ ಉಲ್ಲಂಘನೆಗೆ ಅವಕಾಶ ಕೊಡದಂತೆ ಎಚ್ಚರ ವಹಿಸುವಂತೆ ನಿರ್ದೇಶಿಸಿರುತ್ತದೆ.

ಈ) ಮೆ॥ ರಿಲಯಬಲ್ ಡೆವಲಪರ್ಸ್ ಯೋಜಿಸಿದ ರಿಲಯಬಲ್ ಸನ್ ಫೀಲ್ಡ್ಸ್ ವಸತಿ ಯೊಜನೆಗೆ ಸಾಲ ಮಂಜೂರು ಮಾಡುವುದು ಸರಿಯಲ್ಲ ಎಂದು ಅಂದಿನ ಬ್ಯಾಂಕ್ ಅಧಿಕಾರಿಗಳು ಟಿಪ್ಪಣಿ ನೀಡಿದ್ದಲ್ಲಿ, ವಿವರ ನೀಡುವುದು.

ನಬಾರ್ಡ್ ನಿಗದಿಪಡಿಸಿರುವಂತೆ ವೈಯಕ್ತಿಕ ಸಾಲದ ಮಿತಿ ರೂ.35.00 ಲಕ್ಷಗಳಿದ್ದು ಹಾಗೂ ಸಹಕಾರೇತರ ಸಂಸ್ಥೆಗಳಿಗೆ ನೀಡಬಹುದಾದ ಸಾಲದ

ಎಕ್ಸ್‌ಪೋಶರ್ ಲಿಮಿಟ್ (Exposure Limit) ಈಗಾಗಲೇ ಮುಗಿದಿರುವುದಾಗಿ ನಬಾರ್ಡು ಅಭಿಪ್ರಾಯ ವ್ಯಕ್ತಪಡಿಸಿರುತ್ತದೆ.

ಸಂಖ್ಯೆ:ಸಿಓ 42 ಸಿಎಲ್‌ಎಸ್ 2009

ಸಹಿ/-
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

416 ಶ್ರೀ ನಾಡಗೌಡ ವೆಂಕಟರಾವ್

ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತದಿಂದ ಯಾವ ಯಾವ ಸಹಕಾರಿ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಲಾಗಿದೆ ಹಾಗೂ ಬ್ಯಾಂಕಿನ ಪದಾಧಿಕಾರಿಗಳ ಸಂಬಂಧಿಕರು ಆಡಳಿತ ಮಂಡಳಿಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಲಾಗಿದೆಯೇ; ಹಾಗಿದ್ದಲ್ಲಿ ಸಾಲ ಮಂಜೂರಾತಿ ನಿಯಮಗಳನ್ನು ಪಾಲಿಸಲಾಗಿದೆಯೇ?

ಕಳೆದ ಮೂರು ವರ್ಷದ ಅವಧಿಯಲ್ಲಿ ಈ ಬ್ಯಾಂಕ್ ಸಹಕಾರಿ ಹಾಗೂ ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಲಾಗಿದೆ.

<u>ಸಹಕಾರಿ ಸಕ್ಕರೆ ಕಾರ್ಖಾನೆಗಳು:</u>

1) ಎನ್.ಎಸ್.ಎಸ್.ಕೆ. ಇಮ್ಮಾಮಪುರ
2) ಬಿ.ಎಸ್.ಎಸ್.ಕೆ.ಹಳ್ಳಿಖೇಡ
3) ಎಂ.ಜಿ.ಎಸ್.ಎಸ್.ಕೆ ಭಾಲ್ಕಿ

<u>ಸಹಕಾರೇತರ ಕಾರ್ಖಾನೆಗಳು:</u>

1) ವಿಶಾಲ ಖಂಡಸಾರಿ ಮನ್ನಳ್ಳಿ
2) ವಿಷ್ಣು ಖಂಡಸಾರಿ ಬೀದರ್

ಈ ಕಾರ್ಖಾನೆಗಳ ಆಡಳಿತ ಮಂಡಳಿಗಳಲ್ಲಿ ಬ್ಯಾಂಕಿನ ಪದಾಧಿಕಾರಿಗಳ ಸಂಬಂಧಿಕರು ಇರುವುದಿಲ್ಲ.

ಆ) ಮೇಲ್ಕಂಡ ಸಹಕಾರ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳು ಪಡೆದ ಸಾಲಗಳು ಸಮರ್ಪಕವಾಗಿ ಉಪಯೋಗವಾಗಿ ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಮರುಪಾವತಿಯಾಗಿದೆಯೇ?

ಸಾಲಗಳು ಸಮರ್ಪಕವಾಗಿ ಉಪಯೋಗವಾಗಿ ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ಮರುಪಾವತಿಸಲ್ಪಟ್ಟಿವೆ.

ಇ) ಮರುಪಾವತಿ ಆಗದೇ ಬೀದರ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಸುಸ್ತಿಯಾಗಿದೆಯೇ? ಹಾಗಿದ್ದಲ್ಲಿ, ವಿವರ ನೀಡುವುದು.